Silk Exchange Centre

203. SRI P. RAMDEV (Malleswaram).—Will the Minister of State for Sericulture and Youth Services be pleased to state.—

(a) the reason for the protest made by the Silk workers, about the silk exchange centre ;

(b) the steps taken by the Government to solve their protest?

SMT. RENUKA RAJENDRAN (Minister of State for Sericulture and Youth Services).—

(a) The Silk Workers have not opposed, the establishment of silk exchange centre.

(b) Does not arise.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿಲ್ಲ ಎಂದು ಕಾಣುತ್ತದೆ. ರೇಷ್ಮೆಯನ್ನು ಬೆಳೆಯುವವರು, ಸಿದ್ಧವಸ್ತ್ರಗಳನ್ನು ಮಾರುವವರು ಹಾಗೂ ಕೆಲಸಗಾರರು ರೇಷ್ಮೆ ವಿನಿಮಯ ಕೇಂದ್ರವನ್ನು ಪ್ರತಿಭಟನೆ ಮಾಡಿದ್ದು ಪತ್ರಿಕೆಗಳಲ್ಲಿ ಬಂದಿದೆ. ಈ ಬಗ್ಗೆ ಮನವಿಗಳನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿರುವ ಕಾಪಿಗಳು ನನ್ನ ಹತ್ತಿರ ಇವೆ. ಹೀಗಿರುವಾಗ ರೇಷ್ಮೆ ವಿನಿಮಯ ಕೇಂದ್ರವನ್ನು ಯಾವ ಪಕ್ಷದವರಾಗಲೀ, ಬಳಕೆದಾರರಾಗಲೀ, ಸಿದ್ಧ ವಸ್ತ್ರಗಳನ್ನು ಮಾಡುವವರಾಗಲೀ, ಮಾರುವವರಾಗಲೀ ಯಾರೂ ಪ್ರತಿಭಟನೆ ಮಾಡಲಿಲ್ಲವೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಯಾರೂ ರೇಷ್ಮೆ ವಿನಿಮಯ ಕೇಂದ್ರವನ್ನು ಪ್ರತಿಭಟನೆ ಮಾಡಿಲ್ಲ. ಮಾಡಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ರಾಮದೇವ್.—ಕೋಲಾರದಲ್ಲಿ ರೇಷ್ಮೆ ರೀಲರ್ಸ್ ಮತ್ತು ಕೆಲಸಗಾರರು ೮ ದಿವಸ ಪ್ರತಿಭಟನೆ ಮಾಡಿದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಆದು ಬಂದ ಮೇಲೆ ಇಲಾಖೆಯ ಡೈರೆಕ್ಟರುಗಳು ಅಲ್ಲಿಗೆ ಹೋಗಿ ಅವರನ್ನು ಸಮಾಧಾನ ಮಾಡಿ ರೇಷ್ಮೆ ಎಕ್ಸ್‌ಚೇಂಜ್ ಬಗ್ಗೆ ಅವರಿಗೆ ಸರಿಯಾದ ತಿಳುವಳಿಕೆ ಕೊಟ್ಟು ರೇಷ್ಮೆ ಕೇಂದ್ರದ ಮೂಲಕ ರೇಷ್ಮೆಯನ್ನು ಪೂರಾಟ ಮಾಡಬೇಕು ಎಂದು ಆದೇಶ ಕೊಟ್ಟು ಬಂದಿದ್ದಾರೆ. ಆ ಪ್ರಕಾರ ಅವರು ಮಾಡುತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಯವರು ನನ್ನ ಮೊದಲನೆಯ ಪ್ರಶ್ನೆಗೆ 'ಇಲ್ಲ' ಎಂದೂ ಮತ್ತು ಎರಡನೆಯ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಹೇಳಿದ್ದಾರೆ. ಹೀಗಾದಲ್ಲಿ ನಾವು ಯಾವುದು ಸರಿ, ಯಾವುದು ತಪ್ಪು ಎಂದು ತಿಳಿದುಕೊಳ್ಳಬೇಕು? ಕೋಲಾರದಲ್ಲಿ ಒಂದೇ ಅಲ್ಲ, ಅನೇಕ ಕಡೆಗಳಲ್ಲಿ ಸಿಲ್ಕ್ ಎಕ್ಸ್‌ಚೇಂಜ್ ಮಾಡಿದ್ದರ ಬಗ್ಗೆ ಪ್ರತಿಭಟನೆಯಾಗಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಲಾಗಿದೆ, ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಅವರು ಕೊಟ್ಟಂಥ ಮನವಿಗಳ ಬಗ್ಗೆ ತಾವೇನಾದರೂ ಅವರ ಕಷ್ಟವನ್ನು ಪರಿಹಾರ ಮಾಡತಕ್ಕ ದೃಷ್ಟಿಯಿಂದ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈ ಸದನದಲ್ಲಿ ಕುಮಾರಿ ಪ್ರಮಿಳ ಅವರು ಮತ್ತು ಮಾನ್ಯ ಗಂಗಾಧರನ್ ಅವರು ರೂಲ್ ೫೧೨ರ ಕೆಳಗೆ ಇದೇ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾನು ವಿವರವಾದ ವಿವರಣೆಯನ್ನು ಕೊಟ್ಟಿದ್ದೇನೆ. ಒಂದು ವರ್ಗದ ಪ್ರಕಾರ ವಿನಿಮಯ ಕೇಂದ್ರವನ್ನು ಮಾಡಿರುವುದು ಸರಿಯಲ್ಲವೆಂದೂ ಮತ್ತು ಇನ್ನೊಂದು ವರ್ಗದ ಪ್ರಕಾರ ಸರಿ ಎಂದು ಹೇಳುವ ಅಭಿಪ್ರಾಯಗಳು ಇವೆ. ವ್ಯಾಪಾರಸ್ಥರು, ಮಧ್ಯವರ್ತಿಗಳು ಇದು ಸರಿಯಲ್ಲವೆಂದು ಹೇಳುತ್ತಿದ್ದಾರೆ. ಅವರೇ ನೇಕಾರರನ್ನು ಪ್ರಚೋದಿಸಿ ಈ ರೀತಿಯಾಗಿ ಮುಷ್ಕರ ನಡೆಸುತ್ತಿದ್ದಾರೆ. ಇನ್ನು ವಿನಿಮಯ ಕೇಂದ್ರದ ಬಗ್ಗೆ

ಪೈಕೋರ್ಟಿನಲ್ಲಿ ಕೇಸ್ ಇರುವುದರಿಂದ, ಅದು ಇತ್ಯರ್ಥವಾಗುವ ತನಕ ಈ ವಿಷಯದ ಬಗ್ಗೆ ನಾವು ಹೆಚ್ಚಿನ ವಿವರಕ್ಕೆ ಹೋಗುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಈ ರೇಷ್ಮೆ ವಿನಿಮಯ ಕೇಂದ್ರ ಜಾರಿಗೆ ಬಂದಲಾಗಾಯಿತು, ರೆಷ್ಮೆ ಹುರಿ ಮಾಡತಕ್ಕವರು, ಕೈಮಗ್ಗದಿಂದ ಬಟ್ಟೆ ಮಾಡತಕ್ಕವರು ಮತ್ತು ಯಂತ್ರದಿಂದ ಬಟ್ಟೆ ಮಾಡತಕ್ಕವರು, ಈ ಮೂರು ಬಗೆಯ ಜನರು ರೇಷ್ಮೆಯನ್ನು ಪಡೆದುಕೊಳ್ಳಲು ಸಮಾನ ತೊಂದರೆಯಾಗಿದೆ, ಸಾಕಷ್ಟು ಪ್ರಮಾಣದಲ್ಲಿ ಬೇಕಾದಂಥ ರೇಷ್ಮೆ ಸಿಕ್ಕುತ್ತಿಲ್ಲವಾದ ಕಾರಣ ಮಗ್ಗಗಳು ನಿಂತು ಹೋಗಿವೆ ಎಂದು ಸರ್ಕಾರಕ್ಕೆ ದೂರುಗಳನ್ನು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಕ್ರಮ ತೆಗೆದು ಕೊಂಡಿದ್ದರೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು?

ಶ್ರೀಮತಿ ರೇಣುಕಾ ರಾಜೇಂದ್ರನ್.—ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕ ೭೫ ಭಾಗ ರೇಷ್ಮೆ ದೇಶದಿಂದ ಹೊರಗಡೆ ಹೋಗುತ್ತದೆ. ಉಳಿದ ೩೦ ಪರ್ಸೆಂಟ್ ರೇಷ್ಮೆ ನಮ್ಮ ರಾಜ್ಯದಲ್ಲಿ ಉಪಯೋಗವಾಗುತ್ತಿದೆ. ಇದರಲ್ಲಿ ಪವರ್ ಲೂಮ್ಸ್‌ನವರು ೭೫ ಪರ್ಸೆಂಟ್ ಉಪಯೋಗ ಮಾಡುತ್ತಾರೆ. ಇನ್ನು ೨೫ ಪರ್ಸೆಂಟ್ ಕೈಮಗ್ಗದ ನೇಕಾರರು ಉಪಯೋಗಿಸುತ್ತಿದ್ದಾರೆ. ಅವರಿಗೆ ಬೇಕಾದಂಥ ರೇಷ್ಮೆ, ರೇಷ್ಮೆ ವಿನಿಮಯ ಕೇಂದ್ರದಿಂದ ಸಿಗುತ್ತಿಲ್ಲವೆನ್ನುವುದು ತಪ್ಪು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಅಲ್ಲಿ ಶಿಡ್ಲಗಟ್ಟದ್ದು, ರಾಮನಗರದ್ದು, ಚಾಮರಾಜನಗರದ್ದು ಎಂದು ವೆರೈಟಿ ಸಿಲ್ಕ್ ಸಿಕ್ಕುತ್ತದೆಂದು ಸ್ಲಿಪ್ ಅಟ್ಯಾಚ್ ಮಾಡಿಟ್ಟಿದ್ದೇವೆ. ಆದ್ದರಿಂದ ನೇಕಾರರಿಗೆ ಬೇಕಾದಂಥ ನೂಲು ದೊರೆಯುವುದಿಲ್ಲವೆಂದು ಹೇಳುವುದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ರೇಷ್ಮೆ ವಿನಿಮಯ ಕೇಂದ್ರ ಆದಮೇಲೆ ವ್ಯಾಪಾರಗಾರರಿಗೆ (ಮಾರಾಟಗಾರರಿಗೆ) ಏನಾದರೂ ರೇಷ್ಮೆ ವ್ಯಾಪಾರದ ಬಗ್ಗೆ ರಿಸ್ಟ್ರಿಕ್ಷನ್ಸ್ ಹಾಕಿದ್ದೀರಾ? ರೇಷ್ಮೆ ಮಾರಾಟ ಫ್ರೀ ಆಗಿ ನಡೆಯುತ್ತದೆಯೇ ಅಥವಾ ಅವರಿಗೆ ಏನಾದರೂ ತೊಂದರೆಯಾಗಿದೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಇದರ ಬಗ್ಗೆ, ನಾವು ಒಂದು ಪಿದ್ದಪಡಿಯನ್ನು ಇಷ್ಟರಲ್ಲಿಯೇ ತರುತ್ತಿದ್ದೇವೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸೂಕ್ತ ಸಲಹೆಗಳನ್ನು ಕೊಟ್ಟರೆ ನಾವು ಅವುಗಳನ್ನು ಅಳವಡಿಸಿಕೊಳ್ಳುತ್ತೇವೆ. ಸಿಲ್ಕ್ ಎಕ್ಸ್‌ಚೇಂಜ್ ತೆರೆದಿರುವ ಬಗ್ಗೆ ಕೋರ್ಟ್‌ನಲ್ಲಿ ಕೇಸ್ ಇರುವುದರಿಂದ ಅದರ ಬಗ್ಗೆ ಹೆಚ್ಚಿನ ವಿವರಗಳನ್ನು ಹೇಳುವುದು ಸೂಕ್ತವಲ್ಲ. ಸಿಲ್ಕ್ ಎಕ್ಸ್‌ಚೇಂಜ್‌ನಿಂದ ಉತ್ತಮವಾಗಿ ವ್ಯಾಪಾರ ನಡೆಯುತ್ತಿದೆ ಎಂದು ನಾನು ಇಷ್ಟು ಮಾತ್ರ ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ಸಿಲ್ಕ್ ವಿನಿಮಯ ಕೇಂದ್ರ ಆದಮೇಲೆ, ವ್ಯಾಪಾರದ ಮೇಲೆ ಕಂಟ್ರೋಲನ್ನು ಏನಾದರೂ ವಿಧಿಸಿರುವಿರಾ? ವಿಧಿಸಿದ್ದರೆ, ಅದರಿಂದ ವ್ಯಾಪಾರಗಾರರಿಗೆ ಏನಾದರೂ ತೊಂದರೆಯಾಗಿದೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಸದಸ್ಯರು ಯಾವ ರೀತಿಯ ಕಂಟ್ರೋಲ್ ಎಂದು ಹೇಳುತ್ತಿರುವರೋ ಅದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಬಿ. ಶಿವಯ್ಯ.—ಈಗ ರೇಷ್ಮೆ ಸರಿಯಾಗಿ ಸಿಕ್ಕುತ್ತಿಲ್ಲವೆನ್ನುವ ಪ್ರಶ್ನೆ ಬಂದಿದೆ, ಅದಕ್ಕೇನಾದರೂ ಹೊಸದಾಗಿ ಕಂಟ್ರೋಲ್ ವಿಧಿಸಿರುವರೋ? ಅದರಿಂದ ಏನಾದರೂ ಅನಾನುಕೂಲವಾಗಿದೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಸಿಲ್ಕ್ ಫ್ರೀ ಆಗಿ ನೇಕಾರರಿಗೆ ಸಿಲ್ಕ್ ಎಕ್ಸ್‌ಚೇಂಜ್‌ನಿಂದ ದೊರೆಯುತ್ತಿದೆ.

SRI M. ABDUL LATHEEF.—I want the Hon. Minister to clarify whether the Government accept that there is any problem on account of this Silk Exchange or not. As per the answer given, they say that no workers have protested in spite of the fact that there have been strikes and there have been representations even to the Chief Minister and to the Minister concerned stating that there are lot of difficulties and lot of problems. Therefore, I would like the hon. Minister to

accept or reject the fact that there are problems on account of this Silk Exchange.

ಶ್ರೀಮತಿ ರೇಣುಕಾ ರಾಜೇಂದ್ರನ್.—ನಾನು ಮಾನ್ಯ ಸದಸ್ಯರಾದ ರಾಮದೇವ್ ಅವರ ಪ್ರಶ್ನೆಗೆ ಉತ್ತರ ಹೇಳುವಾಗ ವಿವರವಾಗಿ ಹೇಳಿದ್ದೇನೆ. ಈಗ ಶೋಷಣೆಯಾಗುತ್ತಿರುವುದು ಬೆಳೆಯುವ ರೈತನಿಗೆ. ಇದಕ್ಕೆ ಶಾಸನವನ್ನು ನಾವು ತರಬೇಕಾಯಿತು. ಇದಕ್ಕೆ ಕೆಲವರು ಪರ ಇದ್ದಾರೆ, ಇನ್ನು ಕೆಲವರು ವಿರೋಧವಿದ್ದಾರೆ. ಬಂಡವಾಳಗಾರರು ಸಣ್ಣ ನೇಕಾರರನ್ನು ಶೋಷಣೆ ಮಾಡುತ್ತಿದ್ದಾರೆಂದು ನಾವು ಸಿಲ್ಕ್ ಎಕ್ಸ್‌ಚೇಂಜನ್ನು ತಂದಿರುವುದರಿಂದ ಬಂಡವಾಳಗಾರರಿಗೆ ಇದು ತೊಂದರೆಯಾಗಿದೆ, ಆದ್ದರಿಂದ ಅವರು ನೇಕಾರರನ್ನು ಪ್ರಚೋದನೆ ಮಾಡಿ, ನಾವು ಸಾಲ ಕೊಡುವುದಿಲ್ಲ, ಹೋಗಿ ಎಂದು ಹೇಳುತ್ತಿದ್ದಾರೆ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೇಕಾರರನ್ನು ಇಟ್ಟುಕೊಂಡು ಸ್ಟ್ರೈಕ್ ಮುಂತಾದುವುಗಳನ್ನು ಮಾಡಿಸುತ್ತಿದ್ದಾರೆ. ಕೋರ್ಟಿನಲ್ಲಿ ಈ ವಿಚಾರ ಡಿಸೈಡ್ ಆದಮೇಲೆ ಇದು ಕ್ರಮ ಬದ್ಧವಾಗಿ ನಡೆಯುತ್ತದೆ, ಮತ್ತೆ ಈ ಮುಷ್ಕರ ಮುಂತಾದುವುಗಳು ಉದ್ಭವವಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳು ಬೆಳೆಗಾರರ ಶೋಷಣೆಯಾಗುವುದನ್ನು ತಪ್ಪಿಸುವುದಕ್ಕೆ ಸಿಲ್ಕ್ ವಿನಿಮಯ ಕೇಂದ್ರವನ್ನು ಸ್ಥಾಪನೆ ಮಾಡಿದ್ದೇವೆಂದು ಹೇಳಿದ್ದಾರೆ. ಈ ವಿಚಾರಧಲ್ಲಿ ಪರ, ವಿರೋಧ ಅಭಿಪ್ರಾಯಗಳು ಇರುವುದರಿಂದ ಕೋಠಿಯವರನ್ನು ಕರೆಯಿಸಿ ಅವರೊಂದಿಗೆ ಮಾತನಾಡಿ ಅವರ ಕುಂದು ಕೊರತೆಗಳನ್ನು ಹೋಗಲಾಡಿಸಿ ಇದು ಸುಗಮವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್.—ನಾನು ಮಾನ್ಯ ಸದಸ್ಯರ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ. ಕೆಲವೇ ಜನರ ಪ್ರಚೋದನೆಯಿಂದ ಇಂಥ ತೊಂದರೆಯಾಗಿದೆ. ಈಗ ಎಕ್ಸ್‌ಚೇಂಜ್‌ನಿಂದ ಸರಿಯಾಗಿ ರೇಷ್ಮೆ ದೊರೆಯುತ್ತಿದೆ, ಇನ್ನು ಮುಂದೆ ತೊಂದರೆಯಾಗದಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಕುಮಾರಿ ಎಸ್. ಪ್ರಮಿಳಾ.—ಸಿಲ್ಕ್ ಎಕ್ಸ್‌ಚೇಂಜ್ ಬಗ್ಗೆ ಪರ ವಿರೋಧ ಅಭಿಪ್ರಾಯಗಳು ಇರಬಹುದು, ಶೋಷಣೆಯಾಗತಕ್ಕವರು ಹೋಗಿ ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ರೇಷ್ಮೆಯನ್ನು ಕೊಂಡು ಕೊಳ್ಳಲಿ, ಶೋಷಣೆಯಾಗದೆ ಇರುವವರು ಕೋಠಿಯವರ ಹತ್ತಿರ ರೇಷ್ಮೆಯನ್ನು ಕೊಂಡುಕೊಳ್ಳಲಿ, ಇದಕ್ಕೆ ಸರ್ಕಾರದ ಅಡ್ಡಿ ಏನಾದರೂ ಇದೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಕೋರ್ಟಿನಲ್ಲಿ ಯಾವ ತರಹ ಇದು ಇತ್ಯರ್ಥವಾಗುತ್ತದೆಯೋ ಅದನ್ನು ನೋಡಿಕೊಂಡು ನಂತರ ಇದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ನಿನ್ನೆಯ ದಿವಸ ೧೯೮೦-೮೧ನೇ ವರ್ಷದ ಅಂದಾಜುಗಳನ್ನು ಮಂಡಿಸಿದಾಗ ಮುದ್ರಣದ ತಪ್ಪಿನಿಂದಾಗಿ ಕೆಲವು ದೋಷಗಳಾಗಿವೆ ಅವುಗಳನ್ನು ಈ ರೀತಿ ತಿದ್ದಿಕೊಳ್ಳಬೇಕಾಗಿದೆ. ಇಂಗ್ಲೀಷ್ ಕಾಪಿಯಲ್ಲಿ ಸರಿಯಾಗಿದೆ, ಕನ್ನಡ ಕಾಪಿಯ ಪುಟ ೪೧ರಲ್ಲಿ ಪ್ಯಾರ ೫೨.೬ರಲ್ಲಿ ಕೇಂದ್ರಾವಾರು ೫೦ಕ್ಕೆ ಬದಲಾಗಿ ೩೦ ಎಂದು ಓದಿಕೊಳ್ಳಬೇಕಾಗಿದೆ.

MR. SPEAKER.—Question hour is over.

QUESTIONS FOR ANSWERS ON THE DAY
(but not taken up)

Starting a Hospital at Ashokapuram, Mysore

181. SRI H. GANGADHARAN (Krishnaraja):—Will the Minister for Health and Family Welfare be pleased to state:-

(a) whether the Government has received a representation for starting a Hospital at Ashokapuram, Mysore;